# HIGH COURT OF KARNATAKA

## ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION 2021

## ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ 2021

## TRANSLATION PAPER

## ಭಾಷಾಂತರ ಪತ್ರಿಕೆ

Date: 30.09.2021
ದಿನಾಂಕ: 30.09.2021

Max Marks: 100
ಗರಿಷ್ಠ ಅಂಕಗಳು : 100

Time: 10.00 AM to 1.00 PM
ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ

**Instructions:**
**ಸೂಚನೆಗಳು:**

Write your register number only on the cover page in the space provided in the answer book and nowhere else. You shall not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆಯ ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

1. **Translate the following deposition to Kannada language :**

**ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಕನ್ನಡ ಭಾಷೆಗೆ ಅನುವಾದಿಸಿ:**

**Marks:15**
**ಅಂಕಗಳು: 15**

Duly sworn on 01-02-2016.
**Cross-examination by the counsel for the plaintiff:**

I know the facts of this case. It is true to suggest that property belong to the school is situated on the Northern side of the suit property. It is true to suggest that in Ex.D.1 plaintiff's property is shown as tiled house and its measurement is shown

as 70 X 30 feet. The witness voluntarily said that plaintiff does not own the property of said measurement. It is true to suggest that school authorities have no right over the property of the plaintiff shown in Ex.D.1. When it is suggested to the witness that suit property is the property shown in Ex.D.1, which is in the name of the plaintiff, witness said that plaintiff has encroached the property belonging to the school. There are documents to show that plaintiff has encroached the property of the school. I can produce said document before this court. I do not know that the plaintiff had purchased the suit property as per Ex.P.12 Sale deed.

It is true to suggest that on the basis Ex.P.12 Sale deed, entries in Ex.D.1 were made. I say that plaintiff has encroached the property of the school during the year 1996 and constructed a room in the encroached area. I say that we have filed the suit for removal of said encroachment. I cannot say the particulars of the suit, which is filed for removal of the encroachment made by the plaintiff. I do not know as to whether said suit is still pending or it has been already disposed. I do not know that in the written statement filed on behalf of the school, we have not pleaded about alleged encroachment made by plaintiff and we filing the suit to remove the encroachment. When it was suggested to the witness that we have no right over the suit property shown in the plaint schedule, witness said that the suit property has not been correctly shown.

**2. Translate the following Passage as extracted from a Judgment to Kannada language:** **Marks: 15**

**ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ.** **ಅಂಕಗಳು: 15**

There is no dispute about the occurrence of the accident. But, there is dispute about the manner in which accident took place. There is no dispute about identity of the accused No.1 and 2 as the driver and conductor respectively of the private bus involved in the accident. There is also no dispute about CW2 sustaining grievous injuries due to the accident. The wound certificate relating to CW2 is marked with consent as per Ex.P2. The accused have not claimed that there was any mechanical defect in the private bus involved in the accident. The report of the Inspector of Motor Vehicle is also marked with consent as per Ex.P3, which shows that there is no mechanical defect in the offending bus. In view of all these admitted and undisputed facts, only question to be determined by this court is as to whether the accident was due to the negligence of these accused.

As per the prosecution, accident occurred at Kanakapura Bus Stand when CW2 was getting down from the bus and accused No.2, being the conductor of the bus, gave the signal negligently to move the bus and accused No.1 moved the bus suddenly, due to which, CW2 fallen down and sustained injuries. CW1, being the complainant and eye witness and CW2, being the injured, are the material witnesses in this case. Both these witnesses, who were examined as PW3 and 4 respectively, deposed about the accident and CW2 sustaining injuries. But, both these witnesses have not said that the accident was due to the negligence of these accused. According to me, both these material witnesses not supporting the prosecution is a huge set back to the prosecution.

**3.** **Translate the following document to Kannada language** **Marks: 20**

ಈ ಕೆಳಕಂಡ ದಸ್ತಾವೇಜನ್ನು ಕನ್ನಡ ಭಾಷೆಗೆ ಅನುವಾದಿಸಿ: **ಅಂಕಗಳು: 20**

## AGREEMENT FOR SALE

This agreement for sale of immovable property made on this 25th day of May 2020 between

Mr. Ajith Bhandage, Aged about 48 years, S/o Lakshmana Bhandage, Resident of Bhandage Layout, Neharu Colony, Shapura Road, Kalaburagi (herein after referred to as the FIRST PARTY)

AND

Mrs. Sulochana Hiremath, Aged about 32 years W/o Virupakshaiah Hiremath, Resident of Akshaya Apartment, Bagalkot Road, Bijapur (herein after referred to as the SECOND PARTY)

WHEREAS,

That the 1st party is the absolute owner of the immovable property described in the schedule herein below, by mutation of revenue records in his name. The 1st party acquired absolute right over the schedule property as per the final decree dated 28.08.2015 passed in O.S. No.223/2013 on the file of Court of the Principal Senior Civil Judge, Kalaburagi. 1st party has agreed to sell and 2nd party has agreed to purchase the schedule property subject to the terms and conditions mentioned here-in-below.

1. The total sale consideration agreed for sale of the schedule property is at Rs.12,00,000/- (Rupees Twelve Lakhs)

2. The 2nd party has paid as sum of Rs.4,00,000/- (Rupees Four Lakh) as sale advance and the 1st party acknowledges the receipt of Rs.4,00,000/- (Rupees Four Lakh) from the 2nd party towards part of sale consideration.

3. The balance sale consideration of Rs.8,00,000/- (Rupees Eight Lakh) shall be paid by the 2nd party to the 1st party

within 4 months i.e., at the time of execution and registration of sale deed.

4. The 1st party shall execute sale deed in favour of the 2nd party or her nominees within 4 months from this day by receiving the balance sale consideration.

5. The 2nd party shall bear all the expenses towards purchase of stamp paper, registration charges and all other incidental expenses for registration of the sale deed.

6. The 1st party assures that schedule property is free from any charges, encumbrance, liability, court attachments or injunctions.

7. The 1st party shall not create any charge over the schedule property and cause any damage to the said property.

8. In the event of default by the 1st party, 2nd party shall have the right to approach the court for specific performance.

9. In the event of default by the 2nd party, 1st party shall be entitle for appropriate damages and compensation from the 2nd party.

10. The expression 1st party and 2nd party shall also include their respective legal heirs, representatives and assignees.

**SCHEDULE**

**DESCRIPTION OF IMMOVABLE PROPERTY**

2 acre 38 guntas of agricultural land in Survey No.428/2 of Kalaburagi Kasaba Village, within the jurisdiction of Kalaburagi Registration Sub-district.

In witness whereof the parties have signed this agreement on this the 25th day of May 2020 at Kalaburagi.

1st Party                                        2nd Party

**4. <u>Translate the following deposition to English language :</u>** **Marks:15**

<u>ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಆಂಗ್ಲ ಭಾಷೆಗೆ ಅನುವಾದಿಸಿ.</u> ಅಂಕಗಳು: 15

ನಾನು ಪೋಲಿಸರಿಗೆ ದೂರು ಕೊಡುವ ಕಾಲಕ್ಕೆ ಸಂಜೆ 4.45 ರಿಂದ 5.00 ಗಂಟೆಯಾಗಿತ್ತು. ನಿಪಿ–1 ದೂರಿನಲ್ಲಿ ಅಪಘಾತವಾಗುವ ಕಾಲಕ್ಕೆ ನಾನು ಸುಮಾರು 100 ಅಡಿ ಹಿಂಭಾಗದಲ್ಲಿ ಕಾರಿನಲ್ಲಿ ಬರುತ್ತಿದ್ದೆ ಎಂದು ಹೇಳಿರುವುದಿಲ್ಲ. ನಾನು ಗೋವಿಂದಪ್ಪ ಮತ್ತು ಹರೀಶ್‌ನನ್ನು ಅವರು ಸಿದ್ದನಹಳ್ಳಿಯಿಂದ ಅವರು ಹೊರಡುವ ಕಾಲಕ್ಕೆ ಮಾತನಾಡಿಸಿದ್ದೆನು. ಆಗ ಸಮಯ ಮಧ್ಯಾಹ್ನ 3 ಗಂಟೆಯಾಗಿತ್ತು. ಸಿದ್ದನಹಳ್ಳಿಯಿಂದ ಅಪಘಾತ ನಡೆದ ಸ್ಥಳ ಸುಮಾರು 16 ಕಿ.ಮೀ. ದೂರದಲ್ಲಿದೆ. ಸಿದ್ದನಹಳ್ಳಿಯಿಂದ ನನಗಿಂತ ಮೊದಲು ಗೋವಿಂದಪ್ಪನವರು ಹೊರಟಿದ್ದರು. ಬೇಲೂರಿನಿಂದ ಚಿಕ್ಕಮಗಳೂರಿಗೆ ಬರುವ ರಸ್ತೆಯಲ್ಲಿ ಮೊದಲು ಮಾಗಡಿ ಕೆರೆ ಏರಿ ಸಿಗುತ್ತದೆಂದರೆ ನಿಜ. ಮಾಗಡಿ ಊರಿನಿಂದ ಮಾಗಡಿ ಕೆರೆ ಕಡೆಗೆ ಹೋಗುವ ರಸ್ತೆಯಲ್ಲಿ ಮೊದಲು ಒಂದು ದೊಡ್ಡ ತಿರುವು ಸಿಗುತ್ತದೆಂದರೆ ನಿಜ. ಆ ತಿರುವಿನ ನಂತರ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಪುನಃ ಬಲಭಾಗಕ್ಕೆ ಒಂದು ದೊಡ್ಡ ತಿರುವು ಇದೆ ಎನ್ನುವುದು ನಿಜ. ಕೆರೆ ಏರಿಯ ಎರಡೂ ಕಡೆಗೂ ಕೂಡಾ ಕಲ್ಲು ಕಂಬಗಳನ್ನು ನೆಟ್ಟಿದ್ದಾರೆ ಎನ್ನುವುದು ನಿಜ. ಕೆರೆ ಏರಿಯಲ್ಲಿ ಪೂರ್ತಿ ರಸ್ತೆ ನೇರವಾಗಿಲ್ಲ ಮತ್ತು ತಿರುವುಗಳಿಂದ ಕೂಡಿದೆ ಎನ್ನುವುದು ನಿಜ. ಕೆರೆ ಏರಿಯ ಮೇಲೆ ರಸ್ತೆಯ ಎರಡೂ ಪಕ್ಕಕ್ಕೆ ಇರುವ ಕಲ್ಲುಕಂಬಗಳ ನಡುವಿನ ಅಂತರ ಸುಮಾರು 18 ಅಡಿ ಇದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಅಲ್ಲಿ ಟಾರು ರಸ್ತೆ ಸುಮಾರು 12 ಅಡಿ ಅಗಲ ಇದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸೇತುವೆ ಬಳಿ ರಸ್ತೆಯ ಅಗಲ ಇನ್ನೂ ಚಿಕ್ಕದ್ದಾಗಿ ಇದೆ ಎನ್ನುವುದು ನಿಜವಲ್ಲ. ಸಾಕ್ಷಿಗೆ ಈಗ ಒಂದು ಫೋಟೊವನ್ನು ತೋರಿಸಿ ಅದು ಅಪಘಾತ ನಡೆದ ಸ್ಥಳದಲ್ಲಿರುವ ಸೇತುವೆ ಎನ್ನುವುದನ್ನು ಸಾಕ್ಷಿ ಒಪ್ಪಿಕೊಳ್ಳುತ್ತಾರೆ. ಆ ಫೋಟೋವನ್ನು ನಿಡಿ–1 ಎಂದು ಗುರುತಿಸಲಾಗಿದೆ. ಆ ಫೋಟೋದಲ್ಲಿ ಕಾಣಿಸುವಂತೆ ಸೇತುವೆ ಇರುವ ಕಡೆ ರಸ್ತೆಯ ಎರಡು ಕಡೆ ಇರುವ ಕಟ್ಟೆ ರಸ್ತೆಯ ಒಳಭಾಗದಲ್ಲಿದೆ ಎನ್ನುವುದು ನಿಜ. ಸೇತುವೆಯ ಮೇಲೆ ಇರುವ ಕಟ್ಟೆಯಿಂದ ಕಟ್ಟೆಯ ನಡುವಿನ ಅಗಲ ಸುಮಾರು 10 ರಿಂದ 12 ಅಡಿ ಅಗಲ ಎನ್ನುವುದು ನನಗೆ ಗೊತ್ತಿಲ್ಲ. ಅಪಘಾತವಾಗುವ ಮೊದಲು ನಾನು ಮುಂಭಾಗದಿಂದ ಕೆ.ಎಸ್.ಆರ್.ಟಿ.ಸಿ. ಬಸ್ಸು ಬರುತ್ತಿರುವುದನ್ನು ನೋಡಿರಲಿಲ್ಲ. ಆ ಬಸ್ಸು ಎಷ್ಟು ವೇಗದಿಂದ ಬರುತ್ತಿತ್ತು ಎಂದು ನನಗೆ ಹೇಳಲಾಗುವುದಿಲ್ಲ.

**5. Translate the following passage as extracted from a judgment to English language:** **Marks :15**

**ಈ ಕೆಳಕಂಡ ತೀರ್ಪಿನ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:** **ಅಂಕಗಳು: 15**

**ವಿವಾದಾಂಶ ನಂ.3**

ಈ ವಿವಾದಾಂಶವು ಕರಾರಿನ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ವಾದಿಯು ಸಿದ್ಧನಿರುವುದು ಮತ್ತು ಇಚ್ಛೆ ಉಳ್ಳವನಾಗಿರುವುದಕ್ಕೆ ಸಂಬಂಧಿಸಿದ್ದಾಗಿದೆ. ವಾದಿ ಮತ್ತು ಪ್ರತಿವಾದಿಯರ ನಡುವಿನ ವ್ಯವಹಾರವು ಒಂದು ಹಣಕಾಸಿನ ವ್ಯವಹಾರ ಎಂದು ಸಾಬೀತಾಗಿರುವುದರಿಂದ ಮತ್ತು ಅದೊಂದು ನೈಜ ಖರೀದಿ ವ್ಯವಹಾರವಾಗಿಲ್ಲವಾದ್ದರಿಂದ ಕರಾರಿನ ತನ್ನ ಪಾಲಿನ ಭಾಗವನ್ನು ವಾದಿಯು ನಿರ್ವಹಿಸಲು ಸಿದ್ಧನಿದ್ದೆ ಮತ್ತು ಇಚ್ಛೆ ಉಳ್ಳವನಾಗಿದ್ದ ಎನ್ನುವ ಪ್ರಶ್ನೆಯನ್ನು ಪರಿಗಣಿಸುವುದು ಉದ್ಭವವಾಗುವುದಿಲ್ಲ. ಆದರೂ ಕೂಡ ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 14 ನಿಯಮ 2ರ ಪ್ರಕಾರ ಅಂತಿಮ ತೀರ್ಪನ್ನು ಪ್ರಕಟಿಸುವಾಗ ಎಲ್ಲಾ ವಿವಾದಾಂಶಗಳ ಮೇಲೆ ತನ್ನ ತೀರ್ಮಾನವನ್ನು ಕೊಡುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ಆದುದರಿಂದ ವಾದಿ ಮತ್ತು ಪ್ರತಿವಾದಿಯರ ನಡುವಿನ ವ್ಯವಹಾರ ಒಂದು ಖರೀದಿ ವ್ಯವಹಾರ ಮತ್ತು ನಿಶಾನೆ ಪಿ.4 ಮತ್ತು 5 ನೈಜ ಖರೀದಿ ಕರಾರು ಪತ್ರಗಳು ಎಂದು ಭಾವಿಸಿ ನಾನು ಈ ವಿವಾದಾಂಶಕ್ಕೆ ನನ್ನ ತೀರ್ಮಾನವನ್ನು ಕೊಡುತ್ತೇನೆ.

ನಿರ್ದಿಷ್ಟ ಪರಿಹಾರ ಅಧಿನಿಯಮ 1963ರ ಕಲಂ 16ರ ಪ್ರಕಾರ ನಿರ್ದಿಷ್ಟ ಪಾಲನೆಯ ಡಿಕ್ರಿಯನ್ನು ಪಡೆಯಲು ವಾದಿಯು ತಾನು ಕರಾರಿನ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ಯಾವತ್ತೂ ಸಿದ್ಧನಿದ್ದೆ ಮತ್ತು ಇಚ್ಛೇ ಉಳ್ಳವನಾಗಿದ್ದೆ ಎಂದು ಪ್ರದರ್ಶಿಸಬೇಕಾಗುತ್ತದೆ. ಈ ದಾವೆಯಲ್ಲಿ ವಾದಿಯು ಬಾಕಿ ಉಳಿದ ಖರೀದಿಯ ಹಣವನ್ನು ಪಾವತಿ ಮಾಡಿ ಪ್ರತಿವಾದಿಯರಿಂದ ಖರೀದಿ ಪತ್ರವನ್ನು ಬರೆದುಕೊಳ್ಳಲು ಪ್ರಯತ್ನಪಟ್ಟಿದ್ದ ಎಂದು ತೋರಿಸಲು ಯಾವುದೇ ಸಾಕ್ಷ್ಯ ಇರುವುದಿಲ್ಲ.

ಮೊದಲನೇ ಖರೀದಿ ಕರಾರು ಪತ್ರದಲ್ಲಿ ಖರೀದಿ ಪತ್ರವನ್ನು ಬರೆದು ಕರಾರಿನ ಭಾಗವನ್ನು ನಿರ್ವಹಿಸಲು ಮೂರು ತಿಂಗಳ ಅವಧಿಯನ್ನು ನಿಗದಿಪಡಿಸಿದ್ದರೂ ಕೂಡ ಆ ಮೂರು ತಿಂಗಳ ಅವಧಿ ಮುಗಿದ ಬಳಿಕವು ಕೂಡ ವಾದಿಯು ಪ್ರತಿವಾದಿಯರಿಂದ ಖರೀದಿ ಪತ್ರವನ್ನು ಬರೆಸಿಕೊಳ್ಳಲು ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ವಾದಿಯೇ ಬಾಕಿ ಉಳಿದ ಖರೀದಿಯ ಹಣವಾದ ರೂ.22,00,000/–ವನ್ನು ಮೊದಲನೇ ಖರೀದಿ ಕರಾರು ಪತ್ರ ಆದ ಮೂರು ತಿಂಗಳ ಒಳಗಡೆ ಪಾವತಿ ಮಾಡಿರುವುದಿಲ್ಲ. ವಾದಿಯು ಬಾಕಿ ಉಳಿದ ಖರೀದಿ ಹಣವನ್ನು ಬೇರೆ ಬೇರೆ ತಾರೀಖುಗಳಲ್ಲಿ ಕಂತಿನ ಮೂಲಕ ಪಾವತಿ ಮಾಡುತ್ತ ಹೋಗಿದ್ದರೂ ಕೂಡ ಯಾವತ್ತೂ ಪ್ರತಿವಾದಿಯರಿಂದ ಖರೀದಿ ಪತ್ರವನ್ನು ಬರೆದುಕೊಡಿ ಎಂದು ಕೇಳುವ ಪ್ರಯತ್ನವನ್ನು ಮಾಡಿರುವುದಿಲ್ಲ.

## 6. Translate the following document to English language:

**Marks: 20**

**ಈ ಕೆಳಕಂಡ ದಸ್ತಾವೇಜನ್ನು ಆಂಗ್ಲ ಭಾಷೆಗೆ ಅನುವಾದಿಸಿ:** **ಅಂಕಗಳು: 20**

### ಬಾಡಿಗೆ ಕರಾರು

ಸನ್ ಎರಡು ಸಾವಿರದ ಹತ್ತೊಂಬತ್ತನೆ ಇಸವಿ ಸೆಪ್ಟೆಂಬರ್ ಮಾಹೆ ತಾರೀಖು 17ರಂದು

ಮೈಸೂರು ನಗರ ಕುವೆಂಪು ಬಡಾವಣೆಯ 18ನೇ ಕ್ರಾಸ್‌ನ ಮನೆ ನಂ.23ರಲ್ಲಿ ವಾಸವಿರುವ ದಿವಂಗತ ರಂಗಸ್ವಾಮಿಯವರ ಮಗ ಸುಮಾರು 54 ವರ್ಷ ವಯಸ್ಸಿನ ನಾರಾಯಣಸ್ವಾಮಿ (ಇನ್ನು ಮುಂದೆ 1ನೇ ಪಕ್ಷಗಾರನು ಎಂದು ಕರೆಯಲ್ಪಡುವವರು)

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಖಿನ ಕಣಗಾಲು ಗ್ರಾಮದ ವಾಸಿ ರಂಗೇಗೌಡರ ಮಗ ಸುಮಾರು 45 ವರ್ಷ ವಯಸ್ಸಿನ ಸುರೇಶ್ (ಇನ್ನು ಮುಂದೆ 2ನೇ ಪಕ್ಷಗಾರರು ಎಂದು ಕರೆಯಲ್ಪಡುವವರು)

ಆದ ನಾವುಗಳು ಮಾಡಿಕೊಂಡ ಬಾಡಿಗೆ ಕರಾರು.

ನಮ್ಮ ಪೈಕಿ 1ನೇ ಪಕ್ಷಗಾರರು ಈ ಕೆಳಗೆ ಷೆಡ್ಯೂಲಿನಲ್ಲಿ ವಿವರಿಸಿದ ವಾಸದ ಮನೆಯ ಸಂಪೂರ್ಣ ಮಾಲೀಕರಾಗಿ ಅದರ ಸ್ವಾಧೀನದಲ್ಲಿ ಇದ್ದು ಇನ್ನು ಮುಂದೆ ಅದು ಷೆಡ್ಯೂಲ್ ಕಟ್ಟಡ ಎಂದು ಕರೆಯಲ್ಪಡುತ್ತದೆ.

ನಮ್ಮ ಪೈಕಿ 2ನೇ ಪಕ್ಷಗಾರರು ಷೆಡ್ಯೂಲ್ ಕಟ್ಟಡವನ್ನು ಅವರ ವಾಸಕ್ಕಾಗಿ ಬೇಕು ಎಂದು ಕೇಳಿಕೊಂಡಿದ್ದರಿಂದ 1ನೇ ಪಕ್ಷಗಾರರು ದಿನಾಂಕ 1.10.2019 ರಿಂದ 31.08.2020 (11 ತಿಂಗಳವರೆಗೆ) ಷೆಡ್ಯೂಲ್ ಕಟ್ಟಡವನ್ನು ಈ ಕೆಳಗಿನ ಕರಾರಿಗೆ ಒಳಪಟ್ಟು ಬಾಡಿಗೆಗೆ ಕೊಡಲು ಒಪ್ಪಿಕೊಂಡಿರುತ್ತಾರೆ.

1. 1ನೇ ಪಕ್ಷಗಾರರು ಷೆಡ್ಯೂಲ್ ಕಟ್ಟಡವನ್ನು 2ನೇ ಪಕ್ಷಗಾರರಿಗೆ ಅವರ ಸ್ವಂತ ಉಪಯೋಗ ಮತ್ತು ಅನುಭವಕ್ಕಾಗಿ ಬಾಡಿಗೆಗೆ ಕೊಟ್ಟು 2ನೇ ಪಕ್ಷಗಾರರಿಗೆ ಆ ಸ್ವತ್ತಿನ ಸ್ವಾಧೀನವನ್ನು ಕೊಟ್ಟಿರುತ್ತಾರೆ.

2. 2ನೇ ಪಕ್ಷಗಾರರು ಪ್ರತಿ ತಿಂಗಳ ಕೊನೆಯಂದು ಅಥವಾ ಅದರ ಮೊದಲು ತಿಂಗಳ ಬಾಡಿಗೆ ರೂ.25,000/- (ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ) 1ನೇ ಪಕ್ಷಗಾರರಿಗೆ ಪಾವತಿ ಮಾಡತಕ್ಕದ್ದು.

3. 2ನೇ ಪಕ್ಷಗಾರರು 1ನೇ ಪಕ್ಷಗಾರರಿಗೆ ಮುಂಗಡ ಬಾಡಿಗೆಯಾಗಿ ರೂ.2,00,000/– (ರೂಪಾಯಿ ಎರಡು ಲಕ್ಷ)ವನ್ನು ಪಾವತಿ ಮಾಡಿದ್ದು ಅದನ್ನು 2ನೇ ಪಕ್ಷಗಾರರು ಷೆಡ್ಯೂಲ್ ಕಟ್ಟಡವನ್ನು ಖಾಲಿ ಮಾಡಿ ಕೊಟ್ಟ ಕೂಡಲೆ ಬಡ್ಡಿರಹಿತವಾಗಿ ಮರುಪಾವತಿ ಮಾಡತಕ್ಕದ್ದು.

4. 1ನೇ ಪಕ್ಷಗಾರರು ಮುಂಗಡ ಬಾಡಿಗೆಯನ್ನು ಮರುಪಾವತಿ ಮಾಡುವ ಕಾಲಕ್ಕೆ 2ನೇ ಪಕ್ಷಗಾರರಿಂದ ಬಾಕಿ ಇರುವ ಬಾಡಿಗೆ ಹಣ, ನಷ್ಟ ಪರಿಹಾರ, ವಿದ್ಯುಚ್ಛಕ್ತಿ ಶುಲ್ಕ ಮತ್ತು ನೀರಿನ ಶುಲ್ಕವನ್ನು ಕಡಿತಗೊಳಿಸಲು ಅರ್ಹರಿರುತ್ತಾರೆ.

5. 2ನೇ ಪಕ್ಷಗಾರರು ಷೆಡ್ಯೂಲ್ ಕಟ್ಟಡವನ್ನು ಅದಕ್ಕೆ ಯಾವುದೇ ರೀತಿಯಲ್ಲಿ ಹಾನಿಗೊಳಿಸದೆ ಸುಸ್ಥಿತಿಯಲ್ಲಿ ಇಡತಕ್ಕದ್ದು.

6. 2ನೇ ಪಕ್ಷಗಾರರು ವಿದ್ಯುತ್ ಮತ್ತು ನೀರಿನ ಶುಲ್ಕವನ್ನು ಸರಿಯಾಗಿ ಪಾವತಿ ಮಾಡತಕ್ಕದ್ದು.

7. 1ನೇ ಪಕ್ಷಗಾರರು ನಗರ ಸಭೆಯ ತೆರಿಗೆ ಮತ್ತು ತಿಂಗಳ ನಿರ್ವಾಹಣ ಶುಲ್ಕವನ್ನು ಪಾವತಿ ಮಾಡತಕ್ಕದ್ದು.

8. 2ನೇ ಪಕ್ಷಗಾರರು ಷೆಡ್ಯೂಲ್ ಕಟ್ಟಡವನ್ನು ಮರು ಬಾಡಿಗೆ ಕೊಡುವಂತಿಲ್ಲ ಮತ್ತು ಅದರೊಳಗೆ 3ನೇ ವ್ಯಕ್ತಿಯನ್ನು ಸೇರಿಸುವಂತಿಲ್ಲ.

9. 2ನೇ ಪಕ್ಷಗಾರರು ಬಾಡಿಗೆ ಅವಧಿ ಮುಗಿದ ಕೂಡಲೆ ಷೆಡ್ಯೂಲ್ ಕಟ್ಟಡವನ್ನು ಖಾಲಿ ಮಾಡಿ ಅದರ ಸ್ವಾಧೀನವನ್ನು 1ನೇ ಪಕ್ಷಗಾರರಿಗೆ ಕೊಡತಕ್ಕದ್ದು.

## ಷೆಡ್ಯೂಲ್

## ಕಟ್ಟಡದ ವಿವರಣೆ

ಮೈಸೂರು ನಗರ ಭೋಗಾದಿ ರಸ್ತೆಯ 18ನೇ ಕ್ರಾಸನಲ್ಲಿ ಇರುವ ರಾಮಕೃಷ್ಣ ವಸತಿ ಸಂಕೀರ್ಣದ ನಾಲ್ಕನೇ ಮಹಡಿಯಲ್ಲಿ ಇರುವ ಮನೆ ನಂ.407ರ ವಾಸದ ಮನೆ.

1ನೇ ಪಕ್ಷಗಾರರು 2ನೇ ಪಕ್ಷಗಾರರು

ಸಾಕ್ಷಿದಾರರು:

1.

2.

*******